ಅಂದ್ರೆ ನಿಮ್ಮಲ್ಲಿ ಈಗಾಗಲೇ ಕೆಲವು ನಿಲುವುಗಳಿವೆ. ನಿಮ್ಮ ಬರಹ ಅಂಥ ನಿಲುವುಗಳ ಸುತ್ತಲೇ ಸುತ್ತುತ್ತಿರುತ್ತದೆ ಅಂತ. ಅವುಗಳ ಪರಿಶೀಲನೆಯೂ ಸಾಧ್ಯವಿಲ್ಲವೆಂಬಂತೆ ಬರೆಯುವುದು. ಬರೆಯುತ್ತಲೇ ತೆರೆದುಕೊಳ್ಳುವ ದಾರಿಗಿಂತ, ಮನಸ್ಸಿನಲ್ಲಿ ಮೊದಲೇ ಸಿದ್ಧವಾದ ದಾರಿಯಲ್ಲಿ ಬರೆಯುವುದು.

ಹೌದು, ಲಂಕೇಶ್ ಹೀಗೆ ಹೇಳಿದ್ದುಂಟು. ಇದೊಂದೆ ಅಲ್ಲ, ಅವರು ಹೇಳಿದ್ದು ಇನ್ನೂ ಇವೆ. ಬಂಡಾಯವನ್ನು ಅವರು 'ಡಂಬಾಯ' ಅಂತಲೇ ಕರೀತಿದ್ರು. ಆದ್ರೆ ಅವರ ಟೀಕೆಯ ಬಹುತೇಕ ಅಂಶಗಳು ಲೇವಡಿ ವ್ಯಂಗ್ಯದಲ್ಲೆ ಕಳೆದುಹೋಗುತ್ತಿತ್ತೆ ಹೊರತು ತಾತ್ವಿಕ ಭಿನ್ನಾಭಿಪ್ರಾಯ ಏನು ಅಂತ ಗೊತ್ತಾಗುತ್ತಿರಲಿಲ್ಲ. ಆದ್ರೆ ಎಷ್ಟೋ ಸಲ ಎದುರಿಗೆ ಸಿಕ್ಕಾಗ, 'ಅಯ್ಯೊ ಬರಗೂರ್, ನಾವೇನೊ ಬರೀತಿರ್ತೀವೆ. ನೀವು ಒಳ್ಳೆಯ ಕೆಲಸ ಮಾಡ್ತಿದ್ದೀರಿ, ಮುಂದುವರೆಸಿ' ಅಂತಲೂ ಹೇಳ್ತಿದ್ರು. ಒಮ್ಮೆ ಮನೆಗೆ ಬಂದ್ರು. 'ರೀ ಬರಗೂರ್, ಅಲ್ಲಿ ಸೌತ್ ಎಂಡ್ ಸರ್ಕಲ್‌ನಲ್ಲಿರುವ ಉದ್ಯಾನವನವನ್ನು ಈ ಹೆಗಡೆ ಸರಕಾರ ತಮ್ಮ ಆಪ್ತರಿಗೆ ಕೊಡತಾ ಇದೆ. ಇದನ್ನ ಪ್ರತಿಭಟಿಸಬೇಕಲ್ಲ? ಬನ್ನಿ ಇದಕ್ಕೆಲ್ಲ ನೀವೆ ಸೂಕ್ತವಾದ ವ್ಯಕ್ತಿ' ಅಂತ ಕರಕೊಂಡು ಹೋದ್ರು. ಅಲ್ಲಿ ಅನೇಕ ಪ್ರಗತಿಪರರು, ಕನ್ನಡ ಹೋರಾಟಗಾರರು ಸೇರಿದ್ರು. ಇವತ್ತು ಆ ಉದ್ಯಾನವನ ಉಳಿದಿದ್ರೆ ಅದಕ್ಕೆ ಕಾರಣ ಆವತ್ತಿನ ಧರಣಿ. ನನ್ನ ಬರವಣಿಗೆಯ ಕ್ರಮ ಏನು ಅನ್ನೋದನ್ನು ನಿಮಗೆ ಮೊದಲೇ ಹೇಳಿರುವೆ. ಸಮಾಜದ ನಗ್ನ ಸತ್ಯಗಳನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಿಸುವುದು ನಾನು ಕಂಡುಕೊಂಡ ದಾರಿಗಳಲ್ಲಿ ಒಂದು. ನಾನು ಬದುಕುತ್ತಿರುವ ಲೋಕಕ್ಕೆ ಬದ್ಧನಾಗಿ ಬರೆಯುವುದು ನನ್ನ ಕರ್ತವ್ಯ ಎಂದು ಭಾವಿಸಿರುವೆ. ಲಂಕೇಶ್ ಕೊನೆಗಾಲದಲ್ಲಿ ಆಸ್ಪತ್ರೆಯಲ್ಲಿದ್ದಾಗ ಹೇಳಿದ್ರಂತೆ, 'ನೋಡಿ, ಈ ಬರಗೂರರ ಸಾಹಿತ್ಯ ಕುರಿತು ನನಗೆ ಭಿನ್ನಾಭಿಪ್ರಾಯ ಇದೆ. ಅದನ್ನ ನಾನು ಒಪ್ಪಲಿಕ್ಕಿಲ್ಲ. ಆದ್ರೆ ಇಂದಿನ ಸಾಹಿತ್ಯಿಕ ವಾತಾವರಣದಲ್ಲಿ ಮೋಸ್ಟ್ ರಿಲೈಯೆಬಲ್ ವ್ಯಕ್ತಿ ಅಂದ್ರೆ ಅವರೆ ಕಣ್ರಿ' ಅಂತ. ಲಂಕೇಶರ ಸಾಧನೆಗಳನ್ನು ನಾವ್ಯಾರೂ ಅಲ್ಲಗಳೆಯಲಿಕ್ಕಾಗಲ್ಲ. ಆದ್ರೆ ಅವರ ಸುತ್ತ ಚಾಡಿಕೋರರ ಒಂದು ಗುಂಪಿತ್ತು. ಅದನ್ನು ಅವರಿಗೆ ನಾನು ಪತ್ರದ ಮೂಲಕ ಬರೆದೂ ಹೇಳಿದ್ದೆ. ಲಂಕೇಶ್ ತಮ್ಮ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ನನ್ನ ಹೆಸರು ಪ್ರಸ್ತಾಪಿಸದೆ



> ಬಂಡಾಯ ಸಾಹಿತ್ಯ ಸಂಘಟನೆಯು ಒಂದು ವಿಶಿಷ್ಟ ಸಂದರ್ಭದಲ್ಲಿ ಹುಟ್ಟಿತು. ಅದಕ್ಕೆ ಆ ಕಾಲದ ಸಾಮಾಜಿಕ ಸಾಂಸ್ಕೃತಿಕ ಕಾರಣಗಳಿವೆ. ಯಾವುದೊ ಒಂದು ಘಟನೆಯಿಂದಲೇ ಇಡೀ ಸಂಘಟನೆ ಮತ್ತು ಚಳವಳಿ ಹುಟ್ಟಿತು ಎಂದು ಹೇಳುವುದು ಪೂರ್ಣ ಸತ್ಯವಲ್ಲ.